**ದಿನಾಂಕಃ18-10-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಬಿ.ಕೆ. ಆರ್ ವಾದಿಪರ ವಕೀಲರಿಂದ**

ನನ್ನ ತಂದೆ ಹೆಸರು ಗಂಗಪ್ಪ , ತಾಯಿ ಹೆಸರು ಬುಡ್ಡಮ್ಮ ಎಂದರೆ ಸರಿ. ನನ್ನ ಸ್ವಂತ ಊರು ಜೋಗೇನಹಳ್ಳಿ. ನನ್ನ ತಾಯಿಯ ತಂದೆ ಹೆಸರು ಚಿಕ್ಕನರಸಿಂಹಯ್ಯ. ನನ್ನ ತಾತ ಚಿಕ್ಕನರಸಿಂಹಯ್ಯನಿಗೆ ನಾಲ್ಕು ಜನ ಹೆಣ್ಣುಮಕ್ಕಳು. ಅವರ ಹೆಸರು ಮೊದಲನೇ ಯವರು 1 ನೇ ವಾದಿ ಲಕ್ಷ್ಮಮ್ಮ, 2 ನೇ ಓಬಳಮ್ಮ, 3 ನೇ ಸಾಕಮ್ಮ, 4 ನೇ ನನ್ನ ತಾಯಿ ಬುಡ್ಡಮ್ಮ. ಸಾಕಮ್ಮಳನ್ನು ಗುರುಪನಹಳ್ಳಿಯವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ, ಓಬಳಮ್ಮಳನ್ನು ರಂಗಪ್ಪನಪಾಳ್ಯದ ವ್ಯಕ್ತಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಮದುವೆಯಾದಾಗಿನಿಂದ ಅಕ್ಕತಂಗಿಯರೆಲ್ಲ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಸರಿ. 1 ನೇವಾದಿ ಲಕ್ಷ್ಮಮ್ಮನವರನ್ನು ಜೋಗೇನಹಳ್ಳಿಯ ಚಿಕ್ಕನರಸಿಂಹಪ್ಪ ನವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆಂದರೆ ಸರಿ. ಈ ದಾವೆಯನ್ನು ಲಕ್ಷ್ಮಮ್ಮ ಮತ್ತು ಓಬಳಪ್ಪನವರು ಹೂಡಿರುತ್ತಾರೆ.

ದಾವ ಸ್ವತ್ತಿನ ಸ. ನಂ. 69/9, ಅದರ ವಿಸ್ತೀರ್ಣ 3 ಎಕರೆ 8 ಗುಂಟೆ ಪೂಃ ಮುನಿರಾಜು ರವರ ಜಮೀನು, ಪಃ ಕುರೂಡಿ ರಸ್ತೆ, ಉಃ ತಿಮ್ಮಪ್ಪ ನವರ ಜಮೀನು ಹಾಗೂ ದಃ ಅಂಜನಪ್ಪ ಹಾಗೂ ಅರುಣನವರ ಜಮೀನು ದಾವ ಸ್ವತ್ತಿನ ಚೆಕ್ಕುಬಂದಿ ಆಗಿರುತ್ತದೆ.

ದಾವಾ ಸ್ವತ್ತು ಮೂಲತಃ ಮೂಡ್ಲಗಿರಿಯಪ್ಪನಿಗೆ ಸೇರಿತ್ತು. 1 ನೇ ವಾದಿಯ ಗಂಡ ಸದರಿ ಮೂಡ್ಲಗಿರಿಯಪ್ಪನಿಂದ ದಾವ ಸ್ವತ್ತನ್ನು ಕ್ರಯಕ್ಕೆ ಕೊಂಡುಕೊಂಡಿದ್ದು ಎಂದರೆ ಸರಿ. ಹಾಗೇ ಕ್ರಯಪತ್ರದ ಆಧಾರದ ಮೇಲೆ ಖಾತೆ ಪಹಣಿ 1 ನೇ ವಾದಿಯ

ಗಂಡನ ಹೆಸರಿನಲ್ಲಿ ಆಗಿರುತ್ತದೆಂದರೆ ಸರಿ. ಕ್ರಯಕ್ಕೆ ಕೊಂಡುಕೊಂಡಾಗಿನಿಂದ 1 ನೇ ವಾದಿಯ ಗಂಡ ಸದರಿ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆಂದರೆ ಸರಿಯಲ್ಲ. ಸಾಕ್ಷಿ ನಾವೇ ಇದ್ದೇವೆ ಎನ್ನುತ್ತಾರೆ. 1 ನೇ ವಾದಿಯ ಗಂಡ ಚಿಕ್ಕನರಸಿಂಹಪ್ಪ ಮೃತಪಟ್ಟಿರುತ್ತಾರೆಂದರೆ ಸರಿ. 1 ನೇ ಮತ್ತು 2 ನೇ ವಾದಿಯರು ಆತನ ವಾರಸುದಾರರು ಎಂದರೆ ಸರಿ. ನನ್ನ ತಾಯಿಗೆ ದಾನಪತ್ರ ಮಾಡಿರುವ ಆಧಾರದ ಮೇಲೆ ನನ್ನ ತಂದೆ ಗಂಗಪ್ಪ ರವರ ಹೆಸರಿನಲ್ಲಿ ಖಾತೆ ಪಹಣಿ ಬದಲಾವಣೆ ಆಗಿರುತ್ತದೆ. ದಾನಪತ್ರ ಆದ ನಂತರ ನನ್ನ ತಾಯಿಯ ಹೆಸರಿನಲ್ಲಿ ಖಾತೆ ಪಹಣಿ ಆಗಿತ್ತು. ದಾನಪತ್ರ ಯಾರು ಬರೆದುಕೊಟ್ಟರು ಎಂದರೆ ಚಿಕ್ಕನರಸಿಂಹಯ್ಯನವರು ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ. ಯಾವ ಯಾವ ಆಸ್ತಿಗೆ ಸಂಬಂಧಪಟ್ಟಂತೆ ದಾನಪತ್ರ ಬರೆದುಕೊಟ್ಟರು ಎಂದರೆ ಗೊತ್ತಿಲ್ಲ. 1968 ಇಸವಿಯಲ್ಲಿ ದಾನಪತ್ರ ಬರೆದುಕೊಟ್ಟರು. ನಾನು ಹೇಳಿದಂತೆ ಬುಡ್ಡಮ್ಮಳಿಗೆ ಯಾವುದೇ ದಾನಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿಗೆ ಆಗಿರುವ ಖಾತೆ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಯಾವ ವರುಷದಲ್ಲಿ ಖಾತೆ ಪಹಣಿ ನನ್ನ ತಾಯಿಯ ಹೆಸರಿಗೆ ಆಗಿರುತ್ತದೆಂದರೆ ದಾನಪತ್ರ ಆದ ನಂತರ ಆಗಿರುತ್ತದೆ ಎನ್ನುತ್ತಾರೆ. 1968 ಇಸವಿಯಲ್ಲಿ ಖಾತೆ ಪಹಣಿ ಆಗಿದ್ದು ಈಗಲೂ ಅವರ ಹೆಸರಿನಲ್ಲಿಯೇ ಇದೆ. ನಾನು ನನ್ನ ತಾಯಿ ಹೆಸರಿನಲ್ಲಿದ್ದ ಖಾತೆ ಪಹಣಿಯನ್ನು ನೋಡಿದ್ದೇನೆ.

1 ನೇ ಪ್ರತಿವಾದಿಯನ್ನು ನಾನು ನೋಡಿದ್ದೇನೆ ಅವರು ದೇವನಹಳ್ಳಿಯಲ್ಲಿ ವಾಸವಾಗಿದ್ದಾರೆ. ಅವರು ಊರಿಗೆ ಆಗಾಗ ಬಂದು ಹೋಗುತ್ತಾರೆ. ಅವರ ಆರೋಗ್ಯ ಚೆನ್ನಾಗಿದೆ.

1 ನೇ ವಾದಿ ಲಕ್ಷ್ಮಮ್ಮ ಹಾಗೂ ಆಕೆಯ ಗಂಡ ಚಿಕ್ಕನರಸಿಂಹಪ್ಪ ರವರಿಗೆ ಬುಡ್ಡಮ್ಮ ಎಂಬ ಹೆಸರಿನ ಮಗಳು ಇಲ್ಲ. ಅವರಿಗೆ ಗಂಗಪ್ಪ ಎನ್ನುವ ಅಳಿಯ ಕೂಡ

ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮೃತಪಟ್ಟ ನಂತರ ಆತನ ಸ್ವತ್ತು ಆತನ ಹೆಂಡತಿ ಮಕ್ಕಳಿಗೆ ಹೋಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವೆಲ್ಲ ಜೊತೆಯಲ್ಲೆ ಇದ್ದೇವು ಎನ್ನುತ್ತಾರೆ. ದಾವಾ ಆಸ್ತಿ 1 ನೇ ವಾದಿಯ ಗಂಡ ಚಿಕ್ಕನರಸಿಂಹಪ್ಪ ರವರಿಗೆ ಸೇರಿದ್ದು, ಆತನ ಮರಣ ನಂತರ ವಾದಿಗಳು ಸದರಿ ಸ್ವತ್ತಿನ ಸ್ವಾದೀನದಲ್ಲಿ ಇದ್ದಾರೆಂದರೆ ಸರಿಯಲ್ಲ. 1 ನೇ ವಾದಿಗೆ ಸೇರಿದ ದಾವಾ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ನನ್ನ ತಂದೆ ಗಂಗಪ್ಪನವರು ತಾನು 1 ನೇ ವಾದಿ ಲಕ್ಷ್ಮಮ್ಮ ಹಾಗೂ ಆಕೆಯ ಗಂಡ ಲಕ್ಷ್ಮೀನರಸಿಂಹಪ್ಪರವರ ಮಗಳಾದ ಬುಡ್ಡಮ್ಮಳ ಗಂಡ ಎಂದು ಸುಳ್ಳು ಹೇಳಿ ತನ್ನ ಹೆಸರಿಗೆ ಎಂ ಆರ್ ದಾಖಲೆಯನ್ನು ಮಾಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುತ್ತದೆ. ನಿಡಿ20 ರಲ್ಲಿ ಚಿಕ್ಕನರಸಿಂಹಯ್ಯ ಎಂಬುವರು ಫವತಿಯಾಗಿದ್ದು ಮಗಳ ಗಂಡ ಗಂಗಪ್ಪನಿಗೆ ವಾರಸು ಮೂಲಕ ಖಾತೆ ಬದಲಾಯಿಸಲು ತಕರಾರು ಇರುವುದಿಲ್ಲ ಎಂದು ನಮೂದು ಆಗಿದೆ ಎಂದರೆ ಸರಿ. ಸದರಿ ನಿಡಿ20 ರಂತೆ ಗಂಗಪ್ಪನಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಗೊತ್ತಿಲ್ಲ. ನಿಡಿ21 ರಲ್ಲಿ ನಮೂದಿಸಿರುವ ಗಂಗಪ್ಪ ಬಿನ್ ಓಬಳಪ್ಪ ಎಂದರೆ ನನ್ನ ತಂದೆ ಮತ್ತು ತಾತ ಎನ್ನುತ್ತಾರೆ. ನಿಡಿ21 ನ್ನು ಯಾವ ಆಧಾರದ ಮೇಲೆ ನನ್ನ ತಂದೆ ತಮ್ಮ ಹೆಸರಿಗೆ ಮಾಡಿಕೊಂಡರು ಎಂದು ಗೊತ್ತಿಲ್ಲ.

ರಾಮಕೃಷ್ಣಪ್ಪ, ನಾಗರಾಜು, ನರಸಿಂಹಮೂರ್ತಿ, ನಾರಾಯಣ ಮತ್ತು ಶ್ರೀನಿವಾಸ ನಾವು ಐದು ಜನ ಸೇರಿ ಹಾಗೂ 2 ನೇ ವಾದಿ ಸೇರಿ ವಿಭಾಗಪತ್ರ ಮಾಡಿ ಕೊಂಡಿರುತ್ತೇವೆ. ಸದರಿ ವಿಭಾಗಪತ್ರದ ಪ್ರಕಾರ 2 ನೇ ವಾದಿಗೆ ಯಾವ ಆಸ್ತಿ ಹೋಗಿದೆ ಎಂದು ಗೊತ್ತಿಲ್ಲ. ಸದರಿ ವಿಭಾಗಪತ್ರದಲ್ಲಿ ನನಗೆ ಮತ್ತು ನಾರಾಯಣನಿಗೆ ಸ. ನಂ. 69/9 ಸ್ವತ್ತು ಬಂದಿರುತ್ತದೆ. ಎಷ್ಟು ಆಸ್ತಿಗಳನ್ನು ಸದರಿ ವಿಭಾಗಪತ್ರದಲ್ಲಿ ಹಂಚಿಕೊಂಡಿದ್ದೇವೆಂದು ಗೊತ್ತಿಲ್ಲ. ನಾನು ಹೇಳಿದಂತೆ ಯಾವುದೇ ವಿಭಾಗಪತ್ರ ಆಗಿಲ್ಲ, ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ವಾದಿಯಗಂಡ

ಚಿಕ್ಕನರಸಿಂಹಪ್ಪನವರು ಕ್ರಯಪತ್ರದ ಮೂಲಕ ಸದರಿ ದಾವ ಆಸ್ತಿಯನ್ನು ಕೊಂಡು ಕೊಂಡ ನಂತರ ಆತನ ಮರಣದ ವರೆವಿಗೂ ಆತನೇ ಸ್ವಾಧೀನದಲ್ಲಿದ್ದು ಆತ ಮೃತಪಟ್ಟ ನಂತರ ವಾದಿಯರು 2008 ವರೆಗೂ ಸದರಿ ಸ್ವತ್ತಿನ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ವಾದಿಯರಿಗೆ ಸೇರಿದ ದಾವ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ನನ್ನ ತಂದೆ ಗಂಗಪ್ಪನವರು ತಾನು 1 ನೇ ವಾದಿ ಲಕ್ಷ್ಮಮ್ಮ ಮತ್ತು ಆಕೆಯ ಗಂಡ ಚಿಕ್ಕನರಸಿಂಹಪ್ಪ ರವರ ಮಗಳು ಬುಡ್ಡಮ್ಮನ ಗಂಡ ಎಂದು ಸುಳ್ಳು ಹೇಳಿ ತನ್ನ ಹೆಸರಿಗೆ ಐಡಿ20 ಎಂ ಆರ್ ಮಾಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಇಬ್ಬರು ನಮ್ಮ ಹೆಸರಿನಲ್ಲಿ ಸುಳ್ಳು ಖಾತೆ ಮಾಡಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. 1 ನೇ ವಾದಿಯ ಜೊತೆ ಶಾಮೀಲಾಗಿ ದಿನಾಂಕಃ 18/10/2008 ರಂದು ನಾನು, 2 ರಿಂದ 4 ಹಾಗೂ 6 ರಿಂದ 8 ನೇ ಪ್ರತಿವಾದಿಯರು ಸೇರಿ ನಮಗೆ ದಾವ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹ 1 ನೇ ವಾದಿಗೆ ಕ್ರಯ ಮಾಡಿಕೊಟ್ಟಿರುತ್ತೇವೆಂದರೆ ಸರಿಯಲ್ಲ. 2008 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯ ಜೊತೆ ಸೇರಿ ವಾದಿಯರನ್ನು ದಾವ ಆಸ್ತಿಯಿಂದ ಹೊರಗೆ ಹಾಕಿರುತ್ತೇವೆ ಎಂದರೆ ಅವರು ಇರಲೇ ಇಲ್ಲ ಎನ್ನುತ್ತಾರೆ. ವಿಭಾಗಪತ್ರ ಮೂಲ ದಾಖಲೆ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ತಂದೆಗಾಗಲಿ, ನಮಗಾಗಲಿ, ದಾವ ಸ್ವತ್ತಿನಲ್ಲಿ ಯಾವುದೇ ಹಕ್ಕು ಅಧಿಕಾರ, ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವ ಸ್ವತ್ತುನ್ನು ಮಾರಾಟ ಮಾಡಲು ನಮಗೆ ಯಾವುದೇ ಹಕ್ಕು ಅಧಿಕಾರ, ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ಐಡಿ20 ನ್ನು ಹಾಗೂ ನಮ್ಮ ಹೆಸರಿಗೆ ಆಗಿರುವ ಖಾತೆಯನ್ನು ಪ್ರಶ್ನಿಸಿ ವಾದಿಯರು ಎ.ಸಿ. ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆಂದರೆ ಸರಿ. ದಾವ ಸ್ವತ್ತನ್ನು ನಾವು ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇಲ್ಲದೇ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಸದರಿ ದಾವ ಸ್ವತ್ತಿನ ಮೇಲೆ 1 ನೇ

ಪ್ರತಿವಾದಿಗೂ ಯಾವುದೇ ಹಕ್ಕು ಅಧಿಕಾರ, ಸ್ವಾಧೀನ ಇರುವುದಿಲ್ಲವೆಂದರೆ ಸರಿಯಲ್ಲ. ನಾವು 1 ನೇ ಪ್ರತಿವಾದಿಯ ಜೊತೆ ಚೆನ್ನಾಗಿದ್ದೇವೆಂದರೆ ಸರಿ. ವಾದಿಯರು ಮತ್ತು ನಾವು ಚೆನ್ನಾಗಿದ್ದೇವೆ. ನಾವು ಮಾತನಾಡುತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯರ ಜೊತೆ ನಾನು ಚೆನ್ನಾಗಿರುವುದರಿಂದ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಮಧುಗಿರಿ.**